

ಬದಲಾಗುತ್ತಿರುವ ಸಾಮಾಜಿಕ, ಕೌಟುಂಬಿಕ ಸಂರಚನೆ, ಸ್ವತಂತ್ರ ಜೀವನದ ಪರಿಕಲ್ಪನೆ, ಸಂಬಂಧಗಳ ಮರುವ್ಯಾಖ್ಯಾನ, ತಂತ್ರಜ್ಞಾನ, ಮಾತೃತ್ವದ ಪರಿಕಲ್ಪನೆಯನ್ನೂ ವಿಸ್ತೃತಗೊಳಿಸಿವೆ.

ತಮ್ಮ ವೃತ್ತಿ, ಕರಿಯರ್‌ನಲ್ಲಿ ಆಶಾದಾಯಕವಾಗಿದ್ದು, ವೈಯಕ್ತಿಕ ಜೀವನದಲ್ಲಿಯೂ ಮಗುವನ್ನು ಸಾಕಲು ತಾವು ಸಮರ್ಥರಿದ್ದೇವೆ ಎಂದಾಗ ಯಾವುದೇ ಕಟ್ಟುಪಾಡಿಲ್ಲದೇ ತಾಯ್ತನ ಅನುಭವಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು ಮಹಿಳೆಯರಿಗೆ ಸಾಧ್ಯವಾಗಿದೆ. ಅನಿವಾರ್ಯತೆಯ ಹೊರತಾಗಿ ತಮ್ಮ ಇಚ್ಛೆಯಿಂದಲೇ ಸ್ವತಂತ್ರವಾಗಿ ತಾಯ್ತನವನ್ನು ಪಡೆಯುವ ಆಯ್ಕೆಗಳೂ ಮಹಿಳೆಯರ ಮುಂದಿವೆ.

ಸಿಂಗಲ್ ಮದರ್ ಪೇರೆಂಟಿಂಗ್ ಸಾಧ್ಯತೆಯನ್ನು ಪ್ರಸ್ತುತ ನಾಲ್ಕು ರೀತಿಯಲ್ಲಿ ಗುರುತಿಸಲಾಗುತ್ತಿದೆ:

1. ಪತಿಯನ್ನು ಕಳೆದುಕೊಂಡಾಗ, ವಿಚ್ಛೇದನವಾದಾಗ, ಯಾವುದೇ ಕಾರಣದಿಂದ ದೂರವಾದಾಗ ಮಕ್ಕಳನ್ನು ಸಲಹುವ ತಾಯಂದಿರು.
2. ಅನಿಯೋಜಿತ ಗರ್ಭಧಾರಣೆ ಸಂದರ್ಭದಲ್ಲಿ ತಮ್ಮ ಮಕ್ಕಳ ಹೊಣೆಯನ್ನು ನಿಭಾಯಿಸುವ ತಾಯಂದಿರು.
3. ದತ್ತು ಪಡೆಯಲು ಮುಂದಾಗುವ ಒಂಟಿ ಮಹಿಳೆಯರು.
4. ನಾಲ್ಕನೆಯದು, ಆಯ್ಕೆಯ ತಾಯ್ತನ.

## ಆಯ್ಕೆಯ ತಾಯ್ತನ

‘ಸಿಂಗಲ್ ಮದರ್ ಬೈ ಚಾಯ್ಸ್’ ಈಗಿನ ಸಾಮಾಜಿಕ ಸಂಗತಿಗಳಲ್ಲೊಂದು. ‘ಮದುವೆಗೂ ತಾಯ್ತನಕ್ಕೂ ಸಂಬಂಧವಿರಲೇಬೇಕಿಲ್ಲ’ ಎಂಬುದನ್ನು ಪ್ರತಿಪಾದಿಸುವ ‘ಆಯ್ಕೆಯ ತಾಯ್ತನ’, ಸಂಗಾತಿಯ ಅವಶ್ಯಕತೆಯಿಲ್ಲದೆ ತಾಯಿಯಾಗುವ ಆಯ್ಕೆಯನ್ನು ಒಬ್ಬ ಮಹಿಳೆಗೆ ನೀಡುತ್ತದೆ. ಇದಕ್ಕೆ ಕಾನೂನಿನ ಬೆಂಬಲವೂ ಇದೆ.

ತಮ್ಮ ಆಯ್ಕೆಯಂತೆ ತಾಯಿಯಾಗಲು ಬಯಸುವವರಿಗೆ ಎರಡು ಆಯ್ಕೆಗಳಿವೆ. ಒಂದು, ಮಗುವನ್ನು ದತ್ತು ತೆಗೆದುಕೊಳ್ಳುವುದು. ಮತ್ತೊಂದು ಸಂತಾನೋತ್ಪತ್ತಿ ಸಂಬಂಧಿ ತಂತ್ರಜ್ಞಾನದ ನೆರವಿನ ಮೂಲಕ ಮಕ್ಕಳನ್ನು ಪಡೆಯುವುದು. ಹಲವು ಒಂಟಿ ಮಹಿಳೆಯರು ‘ಐವಿಎಫ್’ ಅಥವಾ ‘ಐಯುಐ’ ಮೂಲಕ ತಾಯಿಯಾಗುವ ಆಯ್ಕೆಯನ್ನು ಆರಿಸಿಕೊಳ್ಳುತ್ತಿದ್ದಾರೆ.

## ‘ಸಿಂಗಲ್ ಮದರ್‌ಹುಡ್’ ಪರಿಕಲ್ಪನೆ

ಸಂಬಂಧಗಳ ಮರುವ್ಯಾಖ್ಯಾನ ಈ ಕಾಲದ ಹೊಸ ಸಂಗತಿಗಳಲ್ಲೊಂದು. ಮದುವೆಯ ಮೇಲೆ ನಂಬಿಕೆ ಇಲ್ಲದಿರುವುದು, ಸೂಕ್ತ ಸಂಗಾತಿ ಸಿಗದೇ ಇರುವುದು, ಮದುವೆ ವಯಸ್ಸಿನ ಏರಿಕೆ, ಸ್ವತಂತ್ರ ಹಾಗೂ ಮುಕ್ತ ಜೀವನದ ಅಭಿಲಾಷೆ, ಕೌಟುಂಬಿಕ ಪದ್ಧತಿಯಲ್ಲಾಗಿರುವ ಬದಲಾವಣೆಗಳು – ಇವೆಲ್ಲವೂ ಹೊಸ ರೀತಿಯ ಕೌಟುಂಬಿಕ ಪರಿಕಲ್ಪನೆ ಹುಟ್ಟಿಕೊಳ್ಳಲು ಪ್ರೇರಕ ಅಂಶಗಳಾಗಿವೆ.

ಸಂಗಾತಿಯ ನೆರವಿಲ್ಲದೆ ಮಗುವನ್ನು ಸಾಕಿ ಸಲಹಿ ತಾವು ಬಯಸಿದ ಪುಟ್ಟ ಸಂಸಾರ ಕಟ್ಟಿಕೊಳ್ಳಲು ಮುಂದಾಗುವ ಮನೋಭಾವ ‘ಸಿಂಗಲ್ ಮದರ್‌ಹುಡ್’ನ ತಳಹದಿಯಾಗಿದೆ. ಮದುವೆ ಬಂಧನವಿಲ್ಲದೆ ಸ್ವತಂತ್ರವಾಗಿರಲು ಬಯಸುವ ಮಹಿಳೆಯರು, ತಾಯ್ತನದ ಖುಷಿಯಿಂದ ವಂಚಿತರಾಗದೇ ಮಗುವನ್ನು ಪಡೆದು ತಮ್ಮದೇ ಕುಟುಂಬವನ್ನು ಹೊಂದಲು ಬಯಸುತ್ತಿರುವುದು ವಿದ್ಯಮಾನವೂ ಹೌದು.

## ಒಂಟಿ ತಾಯಂದಿರ ಸವಾಲುಗಳು

ಒಂಟಿ ತಾಯ್ತನ ಅಥವಾ ಏಕಾಂಗಿ ಪೋಷಣೆ ಹಲವು ಸವಾಲುಗಳನ್ನೂ ತನ್ನೊಂದಿಗೆ ಹೊತ್ತು ತರುತ್ತದೆ. ಸಾಮಾಜಿಕ ಕಟ್ಟುಪಾಡುಗಳು ಒಂದೆಡೆಯಾದರೆ, ಆರ್ಥಿಕ ಅಸಮರ್ಥತೆ ಮತ್ತೊಂದೆಡೆ. ಭಾವನಾತ್ಮಕತೆಯ ಕೊರತೆ ಮತ್ತೂ ಒಂದು ತೊಡಕಾಗಬಹುದು. ಆದರೆ ಇವೆಲ್ಲವನ್ನೂ ಮೀರಿ ಮಕ್ಕಳನ್ನು ಒಬ್ಬಂಟಿಯಾಗಿ ನಿಂತು ಸಲಹಿದ ಎಷ್ಟೋ ತಾಯಂದಿರ ಉದಾಹರಣೆಗಳು ಸಿಗುತ್ತಿವೆ.

ಮಗುವೊಂದರ ಆರೋಗ್ಯಕರ ಬೆಳವಣಿಗೆಗೆ ತಾಯಿ ಮತ್ತು ತಂದೆ ಇಬ್ಬರ ಸಾಂಗತ್ಯವೂ ಬೇಕು ಎನ್ನುವುದು ಜನಪ್ರಿಯ ನಂಬಿಕೆ. ತಂದೆಯ ಹೆಸರು ಮತ್ತು ಆಸರೆಯಿಲ್ಲದ ಮಕ್ಕಳನ್ನು ಸಮಾಜ ಕೂಡ ಸಂದೇಹದ ಕಣ್ಣಿನಿಂದ ನೋಡುತ್ತದೆ. ಹಾಗಾಗಿ, ಮಗುವನ್ನು ಒಂಟಿಯಾಗಿ ಬೆಳೆಸುವುದು ಯಾವುದೇ ಮಹಿಳೆಗೆ ಸುಲಭಸಾಧ್ಯವಲ್ಲ. ಈ ಸಮಸ್ಯೆ–ಸವಾಲುಗಳನ್ನು ಅರಿತೂ ಸಿಂಗಲ್ ಮದರ್ ಪೇರೆಂಟ್ ಆಗಿರಲು ನಿರ್ಧರಿಸುವುದಕ್ಕೆ ಅಪಾರ ಮನೋಸ್ಥೈರ್ಯ ಬೇಕು. ಆರ್ಥಿಕ ಸ್ವಾವಲಂಬನೆಯೂ ಬೇಕು.

ತಕರಾರುಗಳ ನಡುವೆಯೂ, ತಂದೆಯ ಹಂಗಿಲ್ಲದೆ ಮಗುವನ್ನು ಸಮರ್ಥವಾಗಿ ನಿಭಾಯಿಸಲು ಬಯಸುವ ಮಹಿಳೆಯರ ಆತ್ಮವಿಶ್ವಾಸವನ್ನು ಗುರ್ತಿಸುವ ಹಾಗೂ ಅಂಥ ಮಹಿಳೆಯರನ್ನು ಗೌರವದಿಂದ ಕಾಣುವ ಮನಸ್ಥಿತಿ ಸಮಾಜದಲ್ಲಿ ನಿಧಾನವಾಗಿಯಾದರೂ ರೂಪುಗೊಳ್ಳುತ್ತಿದೆ. ಈ ಬದಲಾವಣೆ ಲಿಂಗತಾರತಮ್ಯ ನಿವಾರಣೆ ಪ್ರಕ್ರಿಯೆಯ ಒಂದು ಮುಖ್ಯ ನಡೆಯೂ ಹೌದು. ■